

ಅರುಣ ಪಿ. ಭಟ್ಟ

## ವಾರಭವಿಷ್ಯ: 07.07.2022ರಿಂದ 13.07.2022ರವರೆಗೆ




ವಿವೇಚನೆಯಿಂದ ಕಾರ್ಯಗಳಲ್ಲಿ ಪಾಲ್ಗೊಳ್ಳಿ. ಕೆಲವರ ಮಾತನ್ನು ನಂಬಿ ನಷ್ಟದ ವ್ಯವಹಾರದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಚ್ಚರವಿರಲಿ. ಸಹೋದರರ ವಿಶ್ವಾಸಗಳನ್ನು ಪಡೆಯಲು ಪ್ರಯತ್ನಿಸುವುದು ಸೂಕ್ತ. ನಿಮ್ಮ ಬಹುಕಾಲದ ವ್ಯಾಜ್ಯಗಳಿಗೆ ಸೂಕ್ತ ಪರಿಹಾರಗಳು ದೊರಕಲಿದೆ. ಈ ವಾರ ಮೋಜು ಮಸ್ತಿ ಗಳಿಗಾಗಿ ವಿಶೇಷ ಆಮಂತ್ರಣಗಳು ಹೆಚ್ಚಾಗುವ ಸಾಧ್ಯತೆ ಇದೆ. ಶುಭದಿನ 10. ವಿಷ್ಣು ಸಹಸ್ರನಾಮ ಪಠಿಸಿರಿ.




ಉದ್ಯೋಗದ ಅವಕಾಶಗಳು ಕಂಡುಬರಲಿದೆ. ಹಣಕಾಸು ವ್ಯವಹಾರಗಳು ಯೋಜಿತವಾಗಿ ನಡೆಯಲಿದೆ. ಕಷ್ಟದ ಕಾರ್ಯಗಳನ್ನು ಅನಾಯಾಸವಾಗಿ ಮಾಡಲಿದ್ದೀರಿ. ಅವಿವಾಹಿತರಿಗೆ ವಿವಾಹ ಯೋಗ ಸಾಧ್ಯತೆ ಇದೆ. ಪ್ರೀತಿಪಾತ್ರರಿಗೆ ಉಡುಗೊರೆಗಳನ್ನು ನೀಡುವ ಸಾಧ್ಯತೆ ಇದೆ. ವೈಯಕ್ತಿಕ ಜೀವನದಲ್ಲಿ ಸಣ್ಣ ಪುಟ್ಟ ವಿಷಯಗಳಿಗೂ ಭಿನ್ನಾಭಿಪ್ರಾಯ ತಲೆದೋರಲಿದೆ. ಶುಭದಿನ 09. ಹನುಮಾನ್ ಚಾಲೀಸ್ ಪಠಿಸಿರಿ.




ಆತ್ಮೀಯ ವ್ಯಕ್ತಿಗಳೊಡನೆ ವಿವಾದಗಳು ಹೆಚ್ಚಾಗಬಹುದು. ಭೂ ವ್ಯಾಜ್ಯಗಳಿಂದ ನಿಮ್ಮ ಮನಸ್ಥಿತಿ ಹಾಳಾಗಬಹುದು. ಅನಗತ್ಯವಾಗಿ ಮಾತಿನಲ್ಲಿ ಏನಾದರೂ ಹೇಳಿ ಸಿಲುಕಬೇಡಿ. ಕೆಲಸದ ವಿಷಯದಲ್ಲಿ ಸಮಸ್ಯೆಗಳು ಉದ್ಭವವಾಗಲಿದೆ ಸಮಸ್ಯೆಗಳನ್ನು ಆ ಕ್ಷಣದಲ್ಲೇ ಬಗೆಹರಿಸಲು ಪ್ರಯತ್ನಿಸಿ. ಕೆಲಸಕ್ಕೆ ಇತರ ಸ್ಥಳಕ್ಕೆ ನಿಮ್ಮನ್ನು ನಿಯೋಜನೆ ಮಾಡಬಹುದು. ಶುಭದಿನ 08. ಗಣಪತಿಗೆ 108 ದೂರ್ವಾರ್ಚನೆ ಮಾಡಿಸಿರಿ.




ಯೋಜಿತ ಕಾರ್ಯಗಳಲ್ಲಿ ವ್ಯವಸ್ಥಿತವಾದ ಕಾರ್ಯಶೈಲಿ ಕಂಡುಬರುತ್ತದೆ. ಧನಾಗಮನ, ಲೇವಾದೇವಿ ವ್ಯವಹಾರಗಳಿಂದ ದೂರವಿರುವುದು ಲೇಸು. ಕುಟುಂಬದ ಜೊತೆಗೆ ಹೆಚ್ಚಿನ ಕಾಲ ಕಳೆಯಲಿದ್ದೀರಿ. ಆತ್ಮೀಯರೊಡನೆ ಮನಸ್ತಾಪ ಆಗದಂತೆ ನೋಡಿಕೊಳ್ಳುವುದು ಒಳ್ಳೆಯದು. ಪ್ರೀತಿ ಪ್ರೇಮ ಸಂಬಂಧದಲ್ಲಿ ತೊಡಗಿರುವವರು ಸುಮಧುರವಾದ ಅನುಭವವನ್ನು ಪಡೆಯಲಿದ್ದೀರಿ. ಶುಭದಿನ 11. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಜನಪ್ರಿಯತೆ ಹೆಚ್ಚಾದಂತೆ ವಿರೋಧಿಗಳು ಹೆಚ್ಚಾಗಲಿದ್ದಾರೆ. ನಿಮ್ಮ ಪ್ರತಿ ಕಾರ್ಯಗಳಿಗೂ ತೊಂದರೆ ನೀಡುವ ವ್ಯಕ್ತಿಗಳನ್ನು ಗುರುತಿಸಿ ಆದಷ್ಟು ದೂರವಿಡುವುದು ಒಳ್ಳೆಯದು. ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ. ನಿಮ್ಮ ಆಲೋಚನೆ, ಮನಸ್ಥಿತಿಯನ್ನು ಕ್ಷುಲ್ಲಕ ವಿಚಾರಗಳಿಗೆ ಹರಿಸಬೇಡಿ. ಇದು ನಿಮ್ಮ ಜೀವನಕ್ಕೆ ಮಾರಕವಾಗಬಹುದು. ಶುಭದಿನ 09. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಬಹುಮುಖ್ಯ ಕೆಲಸವನ್ನು ನೀವು ಮರೆತುಬಿಡಬಹುದು ಆದಷ್ಟು ಕಾರ್ಯಗಳ ಬಗ್ಗೆ ಸೂಕ್ತ ಮುತುವರ್ಜಿವಹಿಸಿ. ಆರೋಗ್ಯದ ಹಿತದೃಷ್ಟಿಯನ್ನು ಮನಗಾಣಿರಿ. ಹೊಸ ಆದಾಯ ಮಾರ್ಗ ಕಂಡುಬರಲಿದೆ. ನವೀನವಾಗಿ ಪ್ರಾರಂಭ ಮಾಡಿರುವ ಉದ್ಯೋಗ ಭರವಸೆಯ ಮಹಾಪೂರವನ್ನೇ ತರಲಿದೆ. ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಶುಭದಿನ 07. ಆದಿತ್ಯ ಹೃದಯ ಪಠಿಸಿರಿ.




ವ್ಯವಹಾರದ ನಿಮಿತ್ತ ತಿರುಗಾಟ ಹೆಚ್ಚಾಗಬಹುದು. ಸಾಲದ ಬಾಧೆ ನಿಮ್ಮ ಸಮಸ್ಯೆಗಳಿಗೆ ಮತ್ತಷ್ಟು ಸಂಕಷ್ಟ ತಂದೊಡ್ಡಲಿದೆ. ವ್ಯವಹಾರದಲ್ಲಿ ಅಲಕ್ಷತನ ಹೆಚ್ಚಾಗಬಹುದು. ಕಟ್ಟಡ ಕಾಮಗಾರಿಗಳಲ್ಲಿ ಹಣಕಾಸಿನ ಕುಂದುಕೊರತೆ ಕಾಡಲಿದೆ. ದೈವ ಸಂಕಲ್ಪದ ಮೊರೆಹೋಗುವ ಸಾಧ್ಯತೆ ಕಂಡು ಬರಲಿದೆ. ಭೂ ವ್ಯಾಜ್ಯವೊಂದಕ್ಕೆ ಶ್ರಮ ಹಾಕಲಿದ್ದೀರಿ. ಶುಭದಿನ 10. ಚಂಡಿ ಪಾರಾಯಣ ಮಾಡಿರಿ.




ವಾರದ ಆರಂಭದಿಂದಲೇ ನಿಮ್ಮ ಕೆಲಸಗಳಿಗೆ ವೇಗ ನೀಡುತ್ತೀರಿ. ನಿಮ್ಮ ಕಾರ್ಯ ಯೋಜನೆ ಅಂತಿಮಗೊಳಿಸಲು ಅಧಿಕಾರಿಗಳ ನೆರವು ದೊರೆಯುತ್ತದೆ. ಇದರಿಂದ ನಿಮ್ಮ ಕೆಲಸ ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯವಾಗುತ್ತದೆ. ವೈವಾಹಿಕ ಜೀವನ ಸಂತಸದಿಂದ ಕೂಡಿರುತ್ತದೆ. ಸ್ವಾವಲಂಬನೆಯ ಚಿಂತನೆ ಮೂರ್ತಸ್ವರೂಪ ಪಡೆಯಲಿದೆ. ಶುಭದಿನ 09. ಶ್ರೀ ಲಕ್ಷ್ಮೀ ನರಸಿಂಹ ಪಂಚರತ್ನ ಓದಿರಿ.




ಮಾನಸಿಕ ಕ್ಲೇಶಗಳು ನಿಮ್ಮ ಅಭಿವೃದ್ಧಿಗೆ ಮಾರಕವಾಗಬಹುದು. ಕುಟುಂಬದಲ್ಲಿ ಅಶಾಂತಿಯ ವಾತಾವರಣ ಗೋಚರವಾಗಲಿದೆ. ವ್ಯಾವಹಾರಿಕ ಕ್ಷೇತ್ರದಲ್ಲಿ ಹಿನ್ನಡೆ ಆಗಬಹುದಾದ ಸಾಧ್ಯತೆ ಉಂಟು. ಆರೋಗ್ಯದಲ್ಲಿ ವ್ಯತ್ಯಾಸ ಕಾಣಬಹುದು. ಕೌಟುಂಬಿಕ ಜೀವನದಲ್ಲಿ ನಿಮ್ಮ ಜವಾಬ್ದಾರಿಗಳು ಹೆಚ್ಚಾಗಲಿವೆ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಸಾಧ್ಯತೆಗಳಿವೆ. ಶುಭದಿನ 08. ಕಾಲಭೈರವನ ಸೇವೆ ಮಾಡಿರಿ.




ಉದ್ಯೋಗದಲ್ಲಿ ಉತ್ತಮ ಸ್ಥಾನಮಾನ ಸಿಗಲಿದೆ. ಸಾಹಿತ್ಯ ಚಟುವಟಿಕೆಗಳಲ್ಲಿ ಉತ್ತಮ ಮನ್ನಣೆ ಗಳಿಸಲಿದ್ದೀರಿ. ಕೆಲವು ಅದೃಷ್ಟದ ಭಾಗ್ಯಗಳು ಒದಗಿಬರಲಿದೆ. ದಾಂಪತ್ಯದಲ್ಲಿ ಪ್ರೀತಿಯ ಮನಸ್ಥಿತಿಯಿಂದ ಇರಲಿದ್ದೀರಿ.ಕೋರ್ಟ್ ವ್ಯವಹಾರಗಳು ನಿಮ್ಮ ಪರವಾಗಿ ಆಗುವ ಸಾಧ್ಯತೆ ಇದೆ. ಸಹೋದ್ಯೋಗಿಗಳ ಜತೆ ಮುಖ್ಯವಾದ ಚರ್ಚೆ ನಡೆಸಲಿದ್ದೀರಿ. ಶುಭದಿನ 11. ಸೌಂದರ್ಯ ಲಹರಿ ಪಠಿಸಿರಿ.




ಅಪರಿಚಿತ ವ್ಯಕ್ತಿಗಳಿಂದ ನಿಮ್ಮ ಯೋಜನೆಗಳಲ್ಲಿ ನಷ್ಟವಾಗಬಹುದು. ನಂಬಿಕೆದ್ರೋಹದಂತಹ ಚಟುವಟಿಕೆಗಳು ನಡೆಯಲಿದ್ದು ಎಚ್ಚರದಿಂದಿರಿ. ಪತ್ನಿಯೊಡನೆ ಅತಿ ಹೆಚ್ಚು ಕೋಪ ಕಲಹಗಳಲ್ಲಿ ಪಾಲ್ಗೊಳ್ಳ ಬೇಡಿ. ನಿಮ್ಮೆಲ್ಲಾ ಕೆಲಸಗಳಿಗೆ ತಾಳ್ಮೆ ಅತ್ಯವಶ್ಯಕವಾಗಿ ಬೇಕಾಗಿದೆ. ಹಣಕಾಸಿನ ವಿಷಯದಲ್ಲಿ ಉತ್ತಮ ವ್ಯವಹಾರ ಕಾಣಬಹುದು. ಆರೋಗ್ಯ ಸಾಧಾರಣವಾಗಿ ಇರುತ್ತದೆ. ಶುಭದಿನ 09. ಕನಕಧಾರಾ ಸ್ತೋತ್ರ ಪಠಿಸಿರಿ.




ಕೆಲಸಕಾರ್ಯಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಉತ್ತಮವಾಗಲಿದೆ. ಕಲಿಕೆಯ ವಿಷಯಾಸಕ್ತಿ ತುಂಬಾ ಉತ್ತಮ ಮಟ್ಟದಲ್ಲಿ ಇರಲಿದೆ. ಸ್ನೇಹಿತರ ಜೊತೆಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಮುಂದಾಗಿ. ಆರ್ಥಿಕ ಸ್ಥಿತಿ ಮಧ್ಯಮ ಗತಿಯಲ್ಲಿ ನಡೆಯಲಿದೆ. ಕೆಲಸಗಳಿಗಾಗಿ ಪರಸ್ಥಳ ವಾಸ ಅನುಭವಿಸಬೇಕಾದ ಸಂದರ್ಭ ಬರಬಹುದು. ಕೌಟುಂಬಿಕ ಜೀವನ ಚೆನ್ನಾಗಿರುತ್ತದೆ. ಶುಭದಿನ 10. ಚಂಡಿ ಪಾರಾಯಣ ಮಾಡಿರಿ.